

# ಹಿಪ್ಪೋನ ಬಿಕ್ಕಳಿಕೆ



ಗೀತಾ ಧರ್ಮರಾಜನ್
ಕಲೆ: ಅತನು ರಾಯ್



ಒಂದು ತಡರಾತ್ರಿ, ಗುಲ್ಮೊಹರ್ ಕಾಡಿನ ಎಲ್ಲಾ ಪ್ರಾಣಿಗಳು ಬೆಳ್ಳಿಯ ಚಂದ್ರನ ಕೆಳಗೆ ಶಾಂತ ನಿದ್ರೆಗಾಗಿ ನೆಲೆಸುತ್ತಿರುವಾಗ, ಅತ್ಯಂತ ದೊಡ್ಡ ವಸ್ತುವು ಬಿಳಿ ಲಿಲ್ಲಿ ಕೊಳಕ್ಕೆ ಬಿದ್ದಿತು ... ಅದು ಹವಾಸಿ ಎಂದು ಕರೆಯಲ್ಪಡುವ ಹಿಪ್ಪೋ.

ಗುಲ್‌ಮೊಹರ್ ಕಾಡಿನಲ್ಲಿ ಹುಚ್ಚುತನದ ಮಜಾ ಮಾಡಲು ನೀವೂ ಸೇರಿಕೊಳ್ಳಿ, ಏಕೆಂದರೆ ಅವರು ಹವಾಸಿಯ ಬಿಕ್ಕಳಿಕೆ ನಿಲ್ಲಿಸಲು ಮತ್ತು ಅವನನ್ನು ಮನೆಗೆ ಹಿಂತಿರುಗಿಸಲು ಒಟ್ಟಿಗೆ ಸೇರುತ್ತಾರೆ. ಈ ಪುಸ್ತಕವನ್ನು ಓದಿ, ನೀವು ಮಜಾ ಮಾಡುವುದು ಗ್ಯಾರಂಟಿ!

KATHA

ಕಥಾ ಸಂಸ್ಥೆಯನ್ನು 1988 ರಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಬಡತನದ ಸವಾಲುಗಳನ್ನು ನಿಭಾಯಿಸಲು ಸ್ಥಾಪಿಸಲಾಯಿತು. ಕಥಾ ಮೂರು ಪ್ರಭಾವದ ಕೇಂದ್ರಗಳನ್ನು ಹೊಂದಿದೆ - ಕಥೆ ಸಂಶೋಧನೆ ಮತ್ತು ಸಂಪನ್ಮೂಲ ಕೇಂದ್ರ (ಕಥಾ ವಿಲಾಸಂ), ಸುಸ್ಥಿರ ಕಲಿಕೆಯ ಕೇಂದ್ರ (ಕಲ್ಪವೃಕ್ಷಂ) ಮತ್ತು ಕಥಾ ಆದಿವಾಸಿ ಮತ್ತು ದಲಿತ ಲರ್ನಿಂಗ್ ಲ್ಯಾಬ್ (KADL) ನಾವೀನ್ಯತೆ ಕೇಂದ್ರ. ಕಥಾ ಅವರ 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್ ಈ ಮೂರು ಕೇಂದ್ರಗಳ ಬಲವನ್ನು ಸಹಯೋಗದೊಂದಿಗೆ, ಸಮರ್ಥನೀಯವಾಗಿ ಮತ್ತು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಯ ಜೀವನದ ಮೇಲೆ ಪ್ರಭಾವ ಬೀರಲು ಸಂಯೋಜಿಸುತ್ತದೆ.


"ಇದು ಭಾರತದ ಕಿರೀಟದಲ್ಲಿ ಒಂದು ಶೈಕ್ಷಣಿಕ ಆಭರಣ." - ನೌಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕ, ಅಂತಾರಾಷ್ಟ್ರೀಯ ಹಣಕಾಸು ನಿಧಿ

"[ಕಥಾ]...ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ವಿಶೇಷ ಮತ್ತು ಅನನ್ಯ ಕ್ಷಣ." - ಎಕನಾಮಿಕ್ ಟೈಮ್ಸ್

“ಕಥಾ ಸಂಸ್ಥೆಯು ಮಕ್ಕಳಿಗಾಗಿ ನಿಜವಾದ ವಾತ್ಸಲ್ಯವನ್ನು ಹೊಂದಿದೆ. ಅದಕ್ಕಾಗಿಯೇ ... ಮಕ್ಕಳಿಗಾಗಿ ಅಂತಹ ಬಹುಕಾಂತೀಯ ಚಿತ್ರ ಪುಸ್ತಕಗಳನ್ನು ರಚಿಸಿದೆ. - ಟೈಮ್ ಔಟ್

"ಕಥಾ ಸಂಸ್ಥೆಯ ಕೆಲಸವು, ಮಕ್ಕಳು [ಅವರ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಿಗೆ ಸಮರ್ಥನೀಯ ಮತ್ತು ನೈಜವಾದ ಬದಲಾವಣೆಯನ್ನು ತರಬಹುದು ಎಂಬ ಉದ್ದೇಶದಿಂದ ನಡೆಸಲ್ಪಡುತ್ತದೆ." - ಪೇಪರ್ಟಿಗರ್ಸ್

# ಹಿಪ್ಪೋನ ಬಿಕ್ಕಳಿಕೆ




ಗೀತಾ ಧರ್ಮರಾಜನ್
ಕಲೆ: ಅತನು ರಾಯ್


KATHA
ದೆಹಲಿ | ಚೆನ್ನೈ | ಬೆಂಗಳೂರು

ಒಂದು ದಿನ, ನಡು ಮಧ್ಯಾಹ್ನ, ಗುಲ್ ಮೊಹರ್ ಕಾಡಿನ ಬಿಳಿ ನೈದಿಲೆ ಕೊಳದಲ್ಲಿ ದೊಡ್ಡದು ಅದೇನೋ ಧೊಪ್ಪನೆ ಬಂದು ಬಿದ್ದಿತು.


ದಪ್

ಧೊಪ್






ಮಲ್ಲಿ-ಮೊಲ , ಹನು-ಮಂಗ,
ಗಿರಿ-ಗಿಳಿ, "ಕಾಪಾಡಿ, ಓಡಿ.."
ಅಂತ ಕೂಗಾಡಿದವು



ಪ್ರಾಣಿಗಳೆಲ್ಲಾ ಎಷ್ಟು ಹೆದರಿದವೆಂದರೆ, 'ಅದು' ಕೊಳದಿಂದ ಮೆಲ್ಲಗೆ ಹೊರಗೆ ಬಂದಿದ್ದು ಯಾರೂ ನೋಡಲೇ ಇಲ್ಲ. ಎಲ್ಲರಿಗಿಂತ ಮೊದಲು 'ಅದು' ಮಲ್ಲಿ-ಮೊಲದ ಕಣ್ಣಿಗೆ ಬಿತ್ತು







ನೀರಾನೆ?
ನಿನ್ ಮನೆ
ಆಫ್ರಿಕಾದಲ್ಲವಾ?
ಇಷ್ಟೊಂದ್ ದೂರ
ಹೆಂಗ್ ಬಂದೆ?

ಗಲಿಬಿಲಿಯಿಂದ ಎಚ್ಚರಗೊಂಡ
ರಾತ್ರಿಯೆಂಬ ಗೂಬೆ ಕೇಳ್ತು.


ಚಿನ್ನಿಗೆ ಒಮ್ಮೆಗೆ ಅಳು ಬಂದ್ಬಿಡ್ತು

"ಮ...ಮ...ಮನೆಗೆ ಹೋಗ್ಬೇಕು", ಕಾಲು-ಕೈ
ಆಡಿಸ್ತಾ, ಬಿಕ್ಕುತ್ತಾ, ಅಳ್ತಾ ಹೇಳ್ತು ಚಿನ್ನಿ




ಕಂಬಳಿಹುಳ ಇಳಾ ಕೇಳಿತು
ಇಷ್ಟೊಂದ್ ದೂರ ಹೆಂಗ್ ಬಂದೆ?


ಭಾರತ
ಆಫ್ರಿಕಾ


ನಾನು, ನನ್ನಮ್ಮ ಹುಲ್ಲು ತಿಂತಾ ಇದ್ವಿ. ಈ ಬಿಕ್ ... ಬಿಕ್... ಬಿಕ್ಕಳಿಕೆ ಬಂದು ಒಂದೇ ಸಾರಿ ಹಾರಿ ಬಿಟ್ಟೆ
ನನ್ನಮ್ಮನಿಗಾಗಲಿ, ಚಿಕ್ಕಮ್ಮಂದಿರಿಗಾಗಲಿ, ಅಪ್ಪನಿಗಾಗಲಿ, ನನ್ನ ತಡೆಯಲಿಕ್ಕೆ ಆಗ್ಲಿಲ್ಲ
ಅಲ್ಲಿ ಹಾರಿದ ನಾನು ಇಲ್ಲಿ ಬಂದು ಬಿದ್ದೆ. ಪುನ ಈ ...ಬಿಕ್... ಬಿಕ್ ... ಬಿಕ್ಕಳಿಕೆ ಬಂದರೆ ನಾನೇನು ಮಾಡ್ಲಿ? ಅಷ್ಟೊಂದ್ ಮೇಲೆ ಹೋಗಿ ಕೆಳಗೆ ಬರದೇ ಇದ್ದಾರೆ ಏನ್ ಮಾಡ್ಲಿ?
ತನ್ನ ಸುತ್ತ ಸೇರಿದ್ದ ಪ್ರಾಣಿಗಳನ್ನು ನೋಡ್ತಾ ಹೇಳ್ತು ಚಿನ್ನಿ



ನಿನ್ನ ಬಿಕ್ಕಳಿಕೆ ಹೇಗೆ ಹೋಗ್ಸೋದು ಅಂತ ಯೋಚನೆ ಮಾಡುವ" ಅಂತು ಮಲ್ಲಿ

"ಮತ್ತೆ ನನ್ನನ್ನು ಮನೆ ತಲುಪಿಸುತ್ತೀರಾ?" ಚಿನ್ನಿ ಆಸೆಯಿಂದ ಕೇಳ್ತು

"ನೋಡಣ. ನಮ್ಮೆಲ್ಲ ಗೆಳೆಯರನ್ನು ಕರೆದು ಮಾತಾಡಿದ್ರೆ ಯಾರಾದರೂ ಈ ಬಿಕ್ಕಳಿಕೆಗೆ ಪರಿಹಾರ ಕೊಡಬಹುದು!" ಅಂತ ಹನು ಹೇಳಿತು


ಆನೆ, ಹುಲಿ, ಬಾವಲಿ, ಜೇಡ, ಇನ್ನೆಲ್ಲರನ್ನೂ ಕರೆಯಲು ಮಲ್ಲಿ ಚಂಗನೆ ಓಡಿತು

ಎಲ್ಲರೂ ತಲೆಗೆ ಕೈ ಹಚ್ಚಿ ಕೂತರು ಇದ್ದಕ್ಕಿದ್ದಂತೆ "ನೀರು!" ಎಂದಿತು ಕಾಡು ನರಿ.

ಬಿಕ್ಕಳಿಕೆ ಬಂದ್ರೆ ನೀರು ಕುಡಿಬೇಕು, ನಾವೆಲ್ಲಾ ನೀರೇ ಕುಡಿಯೋದು

"ತುಂಬಾ ಥ್ಯಾಂಕ್ಸ್"
ಎಂದಿತು ಚಿನ್ನಿ
"ನೀರೆಂದರೆ ನಂಗಿಷ್ಟ"

ಹೇಳುತ್ತಾ ಹೇಳುತ್ತಾ
ಕೊಳದೊಳಗೆ ಇಳಿದ ಚಿನ್ನಿ
ಎಲ್ಲರ ಕಣ್ಣಿಂದ ಕಣ್ಮರೆ!



"ಏನಾಯ್ತು? ಚಿನ್ನಿ ಮುಳಿಗಿ ಹೊಯ್ತಾ ಏನು?" ಹೊತ್ತಾದರೂ ಹೊರಗೆ ಬಾರದೆ ಇದ್ದಾಗ ಅಣು-ಆನೆ ಕಳವಳ ಪಟ್ಟಿತು

"ಚಿನ್ನಿನ ನೋಡಿದ್ರೆ ಈಜು ಬರುವ ಹಾಗೆ ಇರಲಿಲ್ಲ" ಚಿಂತೆಯಿಂದ ಹೇಳ್ತು ಕಾ-ಕಾ-ಕಾಗೆ.



ಕಾಗೆ ಹೇಳ್ತಾ ಇದ್ದ ಹಾಗೆಯೇ ಚಿನ್ನಿ ನಗುತ್ತಾ ನೀರಿನಿಂದ ಮೇಲೆ ಮೆಲ್ಲಗೆ ಬಂತು.

"ಅಬ್ಬಾ... ಅಲ್ಲಿ ಕೆಳಗೆ ನನ್ನ ಮನೆ ಹಾಗೇ ಇತ್ತು. ಎಲ್ಲ ಮರೆತು ನೀರ ಕೆಳೆಗೆ ಅಡ್ಡಾಡಿ ಬಂದೆ" ನೀರಿನಲ್ಲಿ ಗುಳು ಗುಳು, ಗುಳು ಗೂಳೂ ಅಂತ ಮಾಡ್ಕೊಂಡು ಕುಶಿಯಿಂದ ಮೇಲೆ ಬಂದು ಹೇಳ್ತು ಚಿನ್ನಿ


"ಏನು ಅಡ್ಡಾಡಿದೆಯಾ? ಅದೂ ನೀರೊಳಗೆ?" ಆಶ್ಚರ್ಯದಿಂದ ಕೇಳಿತು ಅನು ಆನೆ.

"ಕೆರೆಯೊಳಗೆ ನಡೆದಾಡುವುದು ನನಗೆ ತುಂಬಾ ಇಷ್ಟ, ನಾನು ಎಷ್ಟು ಚನ್ನಾಗಿ ಈಜುತ್ತೇನೆ ಗೊತ್ತಾ? ನಿಮ್ಮ್ ಜೊತೆ ನೆಲದ ಮೇಲೆ ಓಡಿದ್ರೂ ನಾನೇ ಗೆಲ್ಲುತ್ತೇನೆ " ಚಿನ್ನಿ ಹೇಳಿತು.

ಇದ್ದಕ್ಕಿದ್ದಂತೆ...





ಚಿನ್ನಿಯ ಬಿಕ್ಕಳಿಕೆ ತಡೆಯಲು ಎಲ್ಲಾರೂ ಏನೆಲ್ಲಾ ಮಾಡಿದವು ...



ಸಕ್ಕರೆ ಕೊಟ್ರು

ಉಸಿರು ಗಟ್ಟಿ ಹಿಡಿಯಲು ಹೇಳಿದ್ರು





ಸ್ವಲ್ಪ ಹೆದರಿಸಿಯೂ ಬಿಟ್ಟರು

ಆದರೆ, ಚಿನ್ನಿ ಇರುವ ಗಾತ್ರಕ್ಕೆ ಅದು ಹೆದರುವ ಪ್ರಾಣಿಯೇ!




ಇಷ್ಟೆಲ್ಲ ಆದಾಗ

"ಚಿನ್ನಿ ಬಿಕ್ಕೋದು ನಿಂತರೆ
ಮನೆ ತಲುಪೋದು
ಹೇಗೆ?"


ಹರಿ ಹುಲಿಯ ಮಾತು ಕೇಳಿ ಹನು ಮಂಗ ತಲೆ ಕೆರೆಯುತ್ತಾ "ಅರೆ! ಇದು ನಮ್ಮ ತಲೆಗೇ ಹೋಗ್ಲಿಲ್ಲಲ್ವ" ಎಂದಿತು


"ಇದನೆಲ್ಲ ಕೇಳಿ ಗಿರಿ ಗಿಳಿ ಹೇಳ್ತು: ""ಎಷ್ಟು ದೊಡ್ಡದಾಗಿ ಚಿನ್ನಿ ಬಿಕ್ಕುತ್ತೋ ಅಷ್ಟೇ ಒಳ್ಳೇದು. ಬಿಕ್ಕಳಿಕೆ ಎಷ್ಟು ದೊಡ್ಡದಿರಬೇಕೆಂದರೆ ಚಿನ್ನಿ ಬಂದ ಹಾಗೇ ವಾಪಸು ಹಾರಿ ಮನೆ ಸೇರಿಬಿಡಬೇಕು!"




"ಚಿನ್ನಿಗೆ ಕಚಗುಳಿ ಇಡೋಣ!" ಎಂದವು ಇರುವೆಗಳು.

"ಚಿನ್ನಿಗೆ ಎಂತಹ ಜೋಕ್ ಹೇಳಬೇಕೆಂದರೆ ಚಿನ್ನಿ ಸೀದಾ ಮನೆ ಸೇರಿ ಬಿಡಬೇಕು!" ಎಂದವು ಕಪಿಗಳು. "ಆಹಾ!" ಎಂದಿತು ಚಿನ್ನಿ. ದೊಡ್ಡದಾಗಿ ಕಣ್ಣು ಬಿಡುತ್ತಾ."ಇಗೋ ಅಮ್ಮ, ಇನ್ನೇನು ನಾನು ಬಂದೆ!"





ಇರುವೆಗಳು ಚಿನ್ನಿಗೆ  ಕಚಗುಳಿಯಿಟ್ಟವು.

ಎಲ್ಲರೂ ತಮಗೆ ಗೊತ್ತಿರುವ ಜೋಕುಗಳನ್ನೂ ತಮಾಷೆಯ ಒಗಟುಗಳನ್ನೂ ಜೋರು ಜೋರಾಗಿ ಹೇಳಿದರು.

ಕೊಕ್ಕರೆಗಳು ಒಂದೇ ಕಾಲಲ್ಲಿ ನಿಲ್ಲೋದೇಕೆ?

ಯಾಕೆಂದರೆ ಇನ್ನೊಂದು ಕಾಲನ್ನೂ ಎತ್ತಿದರೆ, ನೆಲಕ್ಕೆ ಬೀಳಬೇಕಾಗುತ್ತೆ!

ಏಳು ಅಡಿ ಎತ್ತರದ ಗೊರಿಲ್ಲಾ ಮಲಗೋದೆಲ್ಲಿ?

ಅದಕ್ಕೆಲ್ಲಿ ಬೇಕೋ ಅಲ್ಲಿ!

ಹಿಪ್ಪೋವಿನಷ್ಟೇ ದೊಡ್ಡದಾಗಿದ್ದರೂ, ಸ್ವಲ್ಪವೂ ಭಾರವಿಲ್ಲದ್ದು ಯಾವುದು?


ಅದರ ನೆರಳು!

ಕಪ್ಪೆಗಳು ತಮ್ಮ ಹಣವನ್ನು ಎಲ್ಲಿಡುತ್ತವೆ?

ರಿವರ್ ಬ್ಯಾಂಕ್‌ನಲ್ಲಿ!

ಕಪಿಗಳು, ಆನೆಗಳು, ಕಂಬಳಿ ಹುಳಗಳು, ಎಲ್ಲಾ ಪ್ರಾಣಿಗಳು ಮತ್ತು ಪಕ್ಷಿಗಳು ಬಿದ್ದು ಬಿದ್ದು ನಕ್ಕವು.

ಇವರೆಲ್ಲರ ಮಧ್ಯೆ ಚಿನ್ನಿ.
ಚಿನ್ನಿಗೆ ಎಲ್ಲಿಲ್ಲದ ನಗು.
ಅಷ್ಟೊಂದು ಜೋಕುಗಳನ್ನು
ಚಿನ್ನಿ  ಹಿಂದೆಂದೂ ಕೇಳೇ
ಇರಲಿಲ್ಲ!




ಆನೆಯೊಂದರ ಜೋಕು  ಕೇಳ್ತಾ ಕೇಳ್ತಾ ಚಿನ್ನಿ ಬಿಕ್ಕಿತು. ಅದೆಂತಾ ಬಿಕ್ಕಳಿಕೆ ಎಂದರೆ, ಚಿನ್ನಿ-ಹಿಪ್ಪೋನಷ್ಟೇ ದೊಡ್ಡದು



ಹಿಕ್!

ಬಿಕ್ಕುತ್ತಲೇ ಚಿನ್ನಿ ಮೇಲೆ ಹಾರಿತು.. ಆಳದ ಮರಕ್ಕಿಂತಲೂ ಮೇಲಕ್ಕೇರಿ, ಹೇಗೆ ಬಂತೋ ಹಾಗೆಯೇ ಹಾರಿತು. "ಬರ್ತೀನಿ ಕಣ್ರೋ! ತುಂಬಾ ಥ್ಯಾಂಕ್ಸ್!" ಎಂದು ಖುಷಿಯಾಗಿ ಹಾರುತ್ತಿದ್ದ ಚಿನ್ನಿ ಕೂಗಿ ಹೇಳಿತು.



"ಹುಷಾರು ಕಣಪ್ಪ!" ಎಂದವು ಎಲ್ಲಾ ಪ್ರಾಣಿಗಳು.

ಅಬ್ಬಾ, ಅಂತೂ ಮನೆ ಸೇರಿದೆ!



ಹಾ ಹಾ, ನಾನು ಮರೆತೇ ಬಿಟ್ಟೇ... ನೆನ್ನೆಯಷ್ಟೇ ಆಫ್ರಿಕಾದ ಮಿಜ್ಜೀಮಾ ಸ್ಪ್ರಿಂಗ್ಸ್‌ನಿಂದ ಒಂದು ದೊಡ್ಡ ಥ್ಯಾಂಕ್ಸ್‌ಗುಲ್ ಮೊಹರ್ ಕಾಡಿನ ಪ್ರಾಣಿಗಳೆಲ್ಲಾ ಕೇಳಿಸ್ತಂತೆ


ಹೌದು, ನೀವು ಅಂದುಕೊಂಡ್ಡದು ಸರಿ! ಬಿಕ್ಕಳಿಸುತ್ತಾ ಥ್ಯಾಂಕ್ಸ್ ಹೇಳಿದ್ದು ನಮ್ಮ ಚಿನ್ನಿ.

## ಇದ್ಯಾರು ಗೊತ್ತಾ ?

ಇದರ ಹೆಸರಿನ ಅರ್ಥ "ನೀರು ಕುದುರೆ". ಕನ್ನಡದಲ್ಲಿ ಇದನ್ನು ನೀರಾನೆ ಅಂತ ಕೂಡ ಕರೀತಾರೆ. ಸ್ವಲ್ಪ ಹಂದಿಯ ಹಾಗೆ, ಸ್ವಲ್ಪ ಆನೆಯ ಹಾಗೆ ಕಾಣುತ್ತದೆ. ನೀರಾನೆ ತುಂಬಾ ದೊಡ್ಡದು. ಗುಂಡು ಗುಂಡಾಗಿ, ನಿಮಗಿಂತ ೨೦೦ ಪಟ್ಟು ಹೆಚ್ಚು ತೂಕ ಇದ್ದರೂ, ಅದು ನಿಮಗಿಂತ ಹೆಚ್ಚು ವೇಗವಾಗಿ ಓಡಬಲ್ಲದು ಮತ್ತು ಸೊಗಸಾಗಿ ಈಜಬಲ್ಲದು. ಅದರ English ಹೆಸರು ನಿಮಗೆ ಗೊತ್ತೇ? ಅದೇ...

# ಹಿಪ್ಪೋಪೊಟಾಮಸ್,

**ಸಂಶಯವೇ ಬೇಡ!**




"ನೀರಾನೆಯ ಬೆನ್ನಿನ ಮಾತು ಮತ್ತು ಪಕ್ಕೆಗಳ ಚರ್ಮ ನಿಮ್ಮ ನಾಲ್ಕು ಬೆರಳುಗಳ ಅಗಲದಷ್ಟು ದಪ್ಪ! ಅದಕ್ಕೇ ಇರಬಹುದು, ದೊಡ್ಡ ಸಿಂಹವೊಂದನ್ನು ಬಿಟ್ಟು ನೀರಾನೆ ಯಾವುದೇ ಪ್ರಾಣಿಗೂ ಹೆದರುವುದಿಲ್ಲ."

"ನಿಮಗೆ ಈತರ ಸಾಹಸ ಮಾಡಲಿಕ್ಕೆ ಇಷ್ಟ ಇದೆಯೋ ಗೊತ್ತಿಲ್ಲ, ಆದರೆ ಹಿಪ್ಪೋನ ಬಾಯಿ ಎಷ್ಟು ದೊಡ್ಡದೆಂದರೆ ನೀವು ಅದರೊಳಗೆ ಕಾಲಿಟ್ಟು ನಡೆದಾಡಬಹುದು! ಹಿಪ್ಪೋಗಳನ್ನು ಸಾಮಾನ್ಯವಾಗಿ ತಮ್ಮ ಪಾಡಿಗಿರಲು ಬಿಟ್ಟರೆ ಅವು ಶಾಂತ ಹಾಗೂ ಸ್ನೇಹ ಸ್ವಭಾವದ ಪ್ರಾಣಿಗಳೇ. ಆದರೆ, ಕೋಪಗೊಂಡ ಹಿಪ್ಪೋ ಒಂದು ದೋಣಿಯನ್ನು ತನ್ನ ಬಾಯಿಯ ವಸಡಿನಿಂದಲೇ ಪುಡಿ ಪುಡಿ ಮಾಡಿ ಬಿಡಬಹುದು!"

ಹಿಪ್ಪೋಗಳಿಗೆ ಆಫ್ರಿಕಾದ ತಮ್ಮ ನದಿಗಳಲ್ಲಿ ದಿನವಿಡೀ ಅಡ್ಡಾಡುವುದೆಂದರೆ ತುಂಬಾ ಇಷ್ಟ. ಕಳೆಗಿಡಗಳು ಮತ್ತು ನೀರಿನಲ್ಲಿರುವ ಸಸ್ಯಗಳನ್ನು ಬಾಯಿತುಂಬಾ ತುಂಬಿಕೊಂಡು ನೀರಿನಾಳದಲ್ಲಿ ಓಡಾಡುವುದೂ ಇಷ್ಟ. ಹಿಪ್ಪೋಗಳು ಸಸ್ಯಾಹಾರಿಗಳು. ನೀರಿನಲ್ಲಿರುವಾಗ ಶ್ವಾಸಕೋಶಕ್ಕೆ ನೀರು ಹೋಗದಂತೆ ಅವುಗಳ ಮೂಗಿನ ಹೊಳ್ಳೆಗಳನ್ನು ಮುಚ್ಚಲು ಅವಕ್ಕೆ ಚರ್ಮದ ವಿಶೇಷ ಕವಚಗಳಿರುತ್ತವೆ.

ಹಿಪ್ಪೋ ಮರಿಗಳು ನೀರಿನಲ್ಲೇ ಹುಟ್ಟಿ, ನೀರಿನಲ್ಲೇ ಈಜುವುದನ್ನೂ ಕಲಿಯುತ್ತವೆ. ಅವುಗಳು ನಡೆಯುವುದನ್ನು ಕಲಿಯುವ ಮೊದಲೇ ಈಜುತ್ತವೆ! ಒಂದು ಸಲಕ್ಕೆ ಒಂದೇ ಮರಿ ಹುಟ್ಟುತ್ತೆ. ಮರಿ ಹೆಣ್ಣಾಗಲಿ - ಗಂಡಾಗಲಿ, ನಡಿಗೆ ಕಲಿಯುತ್ತಿದ್ದಂತೆ ಅದು ತನ್ನ ಪಾಡಿಗೆ ತಾನು ಓಡಾಡಿಕೊಂಡಿರಲು ಬಯಸುತ್ತದೆ. ಆದರೆ, ಅಮ್ಮ ನೀರಾನೆಯು ಮರಿಗಳ ಹಿಂದೆಯೇ ಇದ್ದು, ಅಪಾಯದಿಂದ ದೂರವಿರುವುದನ್ನು, ಆಹಾರ ಹುಡುಕುವುದನ್ನು, ಆಟ ಆಡುವುದನ್ನು ಮರಿಗಳಿಗೆ ಕಲಿಸುತ್ತವೆ. ಮರಿಗಳು ಅಮ್ಮನನ್ನು ನೋಡಿಯೇ ಎಲ್ಲವನ್ನೂ ಕಲಿಯುತ್ತವೆ.





ಗೀತಾ ಧರ್ಮರಾಜರಿಗೆ ಮಕ್ಕಳಿಗಾಗಿ ಕಥೆ ಬರೆಯುವುದು ಇಷ್ಟ. ಅವರು ಮಕ್ಕಳ ಪತ್ರಿಕೆ ಟಾರ್ಗೆಟ್ ಹಾಗೂ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಪತ್ರಿಕೆ ಪೆನ್ಸಿಲ್ವೇನಿಯಾ ಗೆಜೆಟ್‌ನ ಸಂಪಾದಕರಲ್ಲಿ ಒಬ್ಬರಾಗಿದ್ದರು. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮಾಡಿದ ವಿಶೇಷ ಸೇವೆಗಾಗಿ 2012ರಲ್ಲಿ ಅವರಿಗೆ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಲಾಯಿತು.

ನೂರಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳಿಗೆ ಚಿತ್ರರಚನೆ ಮಾಡಿರುವ ಅತನು ರಾಯ್, ತಮ್ಮ ಕ್ರಿಯಾತ್ಮಕ ಸಾಮರ್ಥ್ಯದ ಬಹುಪಾಲನ್ನು ಮಕ್ಕಳ ಸಾಹಿತ್ಯಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ರಾಯ್ ಅವರು ಬಳಸುವ ವಿವಿಧ ಬಣ್ಣಗಳು ಮತ್ತು ಕಣ್ಣಿಗೆ ಕಟ್ಟುವಂತಹ ವಿವರಗಳು, ಓದುಗರ ಕಣ್ಣು ಹಾಗೂ ಮನಸ್ಸನ್ನು ಸೂರೆಗೊಳ್ಳುತ್ತವೆ. ಹಿಂದೆ ಇಂಡಿಯಾ ಟುಡೆಯಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರಾಗಿ ಕೆಲಸಮಾಡಿದ್ದ ರಾಯ್ ಅವರಿಗೆ ಚಿಲ್ಡ್ರನ್ಸ್ ಚಾಯ್ಸ್ ಅವಾರ್ಡ್ ಫಾರ್ ಬುಕ್ ಇಲ್ಲಸ್ಟ್ರೇಶನ್ಸ್ ಹಾಗೂ ಐಬಿಬಿವೈ ಸರ್ಟಿಫಿಕೇಟ್ ಆಫ್ ಆನರ್ ಫಾರ್ ಇಲ್ಲಸ್ಟ್ರೇಶನ್ಸ್‌ನಂತಹ ಪ್ರಶಸ್ತಿಗಳು ಸಂದಿರುವುದರಲ್ಲಿ ಯಾವುದೇ ಆಶ್ಚರ್ಯ ಇಲ್ಲ. ಅವರ ಸ್ಟೂಡಿಯೊ ಗುರುಗ್ರಾಮದಲ್ಲಿದೆ.

KATHA

ಈ ಆವೃತ್ತಿಯನ್ನು ಮೊದಲು 2024

ಕಾಪಿರೈಟ್ © ಕಥಾ, 2024

ಪಠ್ಯದ ಕಾಪಿರೈಟ್ © ಗೀತಾ ಧರ್ಮರಾಜನ್

ಚಿತ್ರಗಳ ಕಾಪಿರೈಟ್ © ಕಥಾ

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಪೂರ್ವ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರು ಬಳಕೆ ಮಾಡುವಂತಿಲ್ಲ ಅಥವಾ ಬಳಸುವಂತಿಲ್ಲ.

ನವದೆಹಲಿಯಲ್ಲಿ ಮುದ್ರಿಸಲಾಗಿದೆ

ಐಎಸ್ ಬಿಎನ್ 978-93-94185-58-6

ನಮ್ಮ ಧ್ಯೇಯೆ: ಪ್ರತಿಯೊಂದು ಮಗುವೂ ಖುಷಿಗಾಗಿ ಮತ್ತು ಅರ್ಥಕ್ಕಾಗಿ ಓದಬೇಕು!
ಕಥಾ ಎಂಬುದು ಒಂದು ನೋಂದಾಯಿತ ಲಾಭ ರಹಿತ ಸಂಸ್ಥೆ. ಈ ಪುಸ್ತಕವು 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್‌ನ ಕೃತಿಯಾಗಿದೆ.
ಭಾರತದಲ್ಲಿ 300 ಮಿಲಿಯನ್ ಶಾಲೆಗೆ ಹೋಗುವ ಮಕ್ಕಳು ಹೊಸ ಕಲಿಕೆಯ ವಿಧಾನಗಳೊಂದಿಗೆ ಗ್ರೇಡ್ ಮಟ್ಟದ ಓದುವಿಕೆಯನ್ನು ಸಾಧಿಸಲು ನಾವು ಸಹಾಯ ಮಾಡುತ್ತೇವೆ.
ದೆಹಲಿ ವಿಳಾಸ: A3, ಸರ್ವೋದಯ ಎನ್ಕ್ಲೇವ್, ಶ್ರೀ ಅರಬಿಂದೋ ಮಾರ್ಗ, ನವದೆಹಲಿ 110 017
ಚೆನ್ನೈ ವಿಳಾಸ: 6, ಪಾಪನಾಸಂ ಶಿವನ್ ಸಲೈ, ಮೈಲಾಪುರ, ಚೆನ್ನೈ 600 004
ದೂರವಾಣಿ: ದೆಹಲಿ: +91 11 4182 9998 | ಚೆನ್ನೈ: +91 98400 30073
ಇಮೇಲ್: books@katha.org
ವೆಬ್‌ಸೈಟ್: www.katha.org | books.katha.org | learn.katha.org

ಈ ಪುಸ್ತಕದಿಂದ ಬರುವ ಲಾಭವು ಕಥಾ ಶಾಲೆಗಳಲ್ಲಿ ಕಲಿಯುವ ಮಕ್ಕಳ ಗುಣಮಟ್ಟದ ಶಿಕ್ಷಣವನ್ನು ಬೆಂಬಲಿಸುತ್ತದೆ.

ನಮ್ಮ ಪುಸ್ತಕಗಳನ್ನು ಮುದ್ರಿಸಿದ ಕಾಗದವನ್ನು ತಯಾರಿಸಲು ಬಳಸುವ ಮರವನ್ನು ಬದಲಿಸಲು ಕಥಾ ನಿಯಮಿತವಾಗಿ ಮರಗಳನ್ನು ನೆಡುತ್ತದೆ





ಈ ವಿಶಿಷ್ಟ ಸರಣಿ ಮೊದಲ ತಲೆಮಾರಿನ ಓದುಗರನ್ನು ಮನರಂಜನೆ ಮತ್ತು ಅರ್ಥಪೂರ್ಣ ಓದಿನ ಲೋಕಕ್ಕೆ ಸೆಳೆಯುತ್ತದೆ. ಈ ಸರಣಿಯ ಪುಸ್ತಕಗಳು, ತಮ್ಮ ಉನ್ನತ ಗುಣಮಟ್ಟದ ವಿಷಯವಸ್ತು, ಮತ್ತು ವಿನ್ಯಾಸವು ಈ ಮಕ್ಕಳ ಕಲಿಕೆ ಅವಶ್ಯಕತೆಗಳಿಗೆ ತಕ್ಕಂತೆ ಇದೆ . ಹಂಚಿಕೊಂಡ ಮತ್ತುಮಾರ್ಗದರ್ಶಿತ ಓದುವಿಕೆಯ ಮೂಲಕ ಭಾರತದ 2000 ವರ್ಷಗಳ ಸಾಹಿತ್ಯ ಪರಂಪರೆಯನ್ನು, ಶ್ರೇಷ್ಠತೆಯಿಂದ ಆಧುನಿಕತೆಯವರೆಗೆ ಕಥಾ ಒದಗಿಸುತ್ತದೆ. ಇದರೊಂದಿಗೆ, ಕೈಗೆಟುಕುವ ಬೆಲೆಯಲ್ಲಿ ತಲುಪದ ಮಗುವನ್ನು ತಲುಪಲು - ಓದುವಿಕೆ ಮತ್ತು ಶಿಕ್ಷಣವನ್ನು ಪ್ರಜಾಪ್ರಭುತ್ವಗೊಳಿಸುವ ಕಥಾ ಮಾರ್ಗ!

ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು

ಸಂತೋಷ ಮತ್ತು ಅಚ್ಚರಿಗಾಗಿ ಓದಿ




FOR OUR BOOKS

www.books.katha.org

www.books.katha.org

ಮಕ್ಕಳಿಗಾಗಿ


ISBN 978-93-94185-58-6

books.katha.org

₹ 145/-


ನೀಲಿ ಸರಣಿಯಲ್ಲಿ